**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 43/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ನವೀನ | ಪಿಡಬ್ಲ್ಯೂ. 14 |
| ತಂದೆಯ ಹೆಸರು | - | ಪ್ರಕಾಶ | ಸಿ.ಡಬ್ಲ್ಯೂ21 |
| ವಯಸ್ಸು | - | 34 ವರ್ಷ | |
| ಉದ್ಯೋಗ | - | ಆರಕ್ಷಕ ಉಪನಿರೀಕ್ಷಕರು,<br>ಡಿ.ಸಿ.ಆರ್.ಇ.<br>ಮಡಿಕೇರಿ | |
| ವಾಸ ಸ್ಥಳ | - | ಮಡಿಕೇರಿ | |

ದಿನಾಂಕಃ 11-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿಃ 07-05-2022 ರಿಂದ 15-06-2023 ರವರೆಗೆ ಸಖರಾಯಪಟ್ಟಣ ಪೋಲಿಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

2. ದಿನಾಂಕಃ 23-02-2023 ರಂದು ಚಾಸಾ.19 ರವರಿಂದ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದು ಪರಿಶೀಲಿಸಿದೆನು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆನು. ಸ್ಥಳಕ್ಕೆ ಫ್ರಾಸಾ.1 ಮತ್ತು ಫ್ರಾಸಾ.2 ರವರಿಗೆ ನೋಟೀಸನ್ನು ಕೊಟ್ಟು ಪಂಚರನ್ನಾಗಿ ಬರಮಾಡಿಕೊಂಡೆನು. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ

ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಹಾಜರಿದ್ದ ಪ್ರತ್ಯಕ್ಷ ಸಾಕ್ಷಿಯಾದ ಫ್ರಾಸಾ.8 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದೆನು. ಸದರಿ ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ದೊರೆತ ರಕ್ತಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಪ್ರತ್ಯೇಕವಾಗಿ ಅಮಾನತುಪಡಿಸಿಕೊಂಡೆನು. ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಫೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿರುತ್ತದೆ.

3. ನಂತರ ಠಾಣೆಗೆ ಹಿಂದಿರುಗಿ ಸದರಿ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 19/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.25 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.25(ಎ) ಎಂದು

ಗುರುತಿಸಲಾಯಿತು. ಸದರಿ ವಸ್ತುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲಾಗಿರುತ್ತದೆ.

4. ದಿಃ 25-02-2023 ರಂದು ಚಾಸಾ.1 ರವರ ಮಾವನಾದ ಫ್ರಾಸಾ.6 ರವರು ಕೃತ್ಯ ನಡೆದ ಸಮಯದಲ್ಲಿ ಚಾಸಾ.1 ರವರು ಧರಿಸಿದ್ದ ರಕ್ತದ ಕಲೆಗಳಾಗಿದ್ದ ತಿಳಿ ಗುಲಾಬಿ ಬಣ್ಣದ ಒಂದು ತುಂಬು ತೋಳಿನ ಶರ್ಟು ಮತ್ತು ನೀಲಿ ಬಣ್ಣದ ಒಂದು ಕಾಚಾವನ್ನು ತಂದು ಹಾಜರುಪಡಿಸಿದ್ದು ಅವುಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಫ್ರಾಸಾ.3 ಮತ್ತು ಫ್ರಾಸಾ.4 ರವರಿಗೆ ನೋಟೀಸನ್ನು ಕೊಟ್ಟು ಪಂಚರನ್ನಾಗಿ ಬರಮಾಡಿಕೊಂಡೆನು. ಸದರಿ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಸಿ) ಎಂದು ಗುರುತಿಸಲಾಯಿತು. ಸದರಿ ಪಂಚರ ಸಮಕ್ಷಮ ಫ್ರಾಸಾ.6 ರವರು ಹಾಜರುಪಡಿಸಿದ ಬಟ್ಟೆಗಳನ್ನು ಪ್ರತ್ಯೇಕವಾಗಿ ಅಮಾನತುಪಡಿಸಿಕೊಂಡು ಆ ಬಗ್ಗೆ ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿದೆನು. ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಡಿ) ಎಂದು ಗುರುತಿಸಲಾಯಿತು. ಸದರಿ

ಪಂಚನಾಮೆಯ ಕಾಲಕ್ಕೆ ಫೋಟೋವನ್ನು ತೆಗೆಸಿರುತ್ತೇನೆ. ಸಾಕ್ಷಿ ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿರುತ್ತದೆ.

5. ಸದರಿ ಬಟ್ಟೆಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ: 20/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ.26 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

6. ದಿಃ 27-02-2023 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಚಾಸಾ.14 ರವರಿಗೆ ಮನವಿ ಸಲ್ಲಿಸಿದೆನು. ಅದೇ ದಿನ ಚಾಸಾ.15 ರವರಿಗೆ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ದಾಖಲೆ ನೀಡುವಂತೆ ಮನವಿ ಸಲ್ಲಿಸಿದೆನು. ಸದರಿ ಮನವಿಗಳನ್ನು ಮತ್ತು ಅವುಗಳಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ.27 ಮತ್ತು ಪಿ.28 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.27(ಎ) ಮತ್ತು ಪಿ.28(ಎ) ಎಂದು ಗುರುತಿಸಲಾಯಿತು.

7. ಅದೇ ದಿನ ಸಿಪಿಸಿ ಅರುಣ್ ಮತ್ತು ದೇವರಾಜರವರನ್ನು

ಆರೋಪಿಯ ಪತ್ತೆಗಾಗಿ ನೇಮಿಸಿ ಕಳುಹಿಸಿದೆನು. ಅದೇ ದಿನ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ಮನವಿಯನ್ನು ಸಲ್ಲಿಸಿ ಚಾಸಾ.1 ರವರ ರಕ್ತದ ಗುಂಪಿನ ಬಗ್ಗೆ ದಾಖಲೆ ನೀಡುವಂತೆ ಕೋರಿದೆನು. ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.29 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು.

8. ದಿಃ 28-02-2023 ರಂದು ಆರೋಪಿಯ ಪತ್ತೆಗಾಗಿ ಮೇಲೆ ಹೇಳಿದ ಸಿಬ್ಬಂದಿಗಳನ್ನು ಕಳುಹಿಸಿ ಕೊಟ್ಟೆನು. ಅದೇ ದಿನ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಯಿಂದ ಚಾಸಾ.1 ರವರ ರಕ್ತದ ಗುಂಪಿನ ಬಗ್ಗೆ ವರದಿ ಬಂದಿದ್ದು, ಅದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.30 ಎಂದು ಗುರುತಿಸಲಾಯಿತು.

9. ಕೃತ್ಯಕ್ಕೆ ಸಂಬಂದಿಸಿದಂತೆ ಅಮಾನತುಪಡಿಸಿಕೊಂಡಿದ್ದ ವಸ್ತುಗಳನ್ನು ತಜ್ಞರ ಪರೀಕ್ಷೆಗಾಗಿ ಮಂಗಳೂರಿನ ಆರ್.ಎಫ್.ಎಸ್.ಎಲ್ ಗೆ ದಿಃ 06-03-2023 ರಂದು ಸಿಪಿಸಿ ಪ್ರತಾಪ್ ರವರ ಮುಖಾಂತರ ಕಳುಹಿಸಿಕೊಟ್ಟೆನು. ಅದರಂತೆ ಅವರು ವಸ್ತುಗಳನ್ನು ಆರ್. ಎಫ್.ಎಸ್.ಎಲ್ ಗೆ ಸಲ್ಲಿಸಿದ ಬಗ್ಗೆ ದಿಃ 07-03-2023 ರಂದು ಸ್ವೀಕೃತಿಯನ್ನು ಪಡೆದು ಠಾಣೆಗೆ ಹಿಂದಿರುಗಿ ನನಗೆ ಹಾಜರುಪಡಿಸಿದರು. ಅದೇ ದಿನ ಆರೋಪಿಯ ಪತ್ತೆಗಾಗಿ ಕಳುಹಿಸಿಕೊಟ್ಟಿದ್ದ ಅರುಣ ಮತ್ತು ದೇವರಾಜರವರು ಆರೋಪಿಯ ಪತ್ತೆಯಾಗಿಲ್ಲ ಎಂದು ವರದಿ

ಮಾಡಿದರು.

10. ದಿಃ 17-03-2023 ರಂದು ಚಾಸಾ.14 ರವರಿಂದ ನಕ್ಷೆಯನ್ನು ಪತ್ರದೊಂದಿಗೆ ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ಸಾಕ್ಷಿಯು ಸದರಿ ಪತ್ರ ಮತ್ತು ನಕ್ಷೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಈಗಾಗಲೇ ನಿಪಿ.13 ಎಂದು ಗುರುತಿಸಲಾಗಿದ್ದು ನಕ್ಷೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು.

11. ದಿಃ 12-04-2023 ರಂದು ಪ್ರಾಸಾ.7 ರವರಿಗೆ ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ನೀಡುವಂತೆ ಮನವಿ ಸಲ್ಲಿಸಿದೆನು. ಸದರಿ ಮನವಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.31 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು.

12. ದಿಃ 15-04-2023 ರಂದು ಪ್ರಾಸಾ.7 ರವರಿಂದ ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ಗಾಯದ ಪ್ರಮಾಣಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.15(ಬಿ) ಎಂದು ಗುರುತಿಸಲಾಯಿತು.

13. ದಿಃ 20-05-2023 ರಂದು ಆರೋಪಿಯ ಪತ್ತೆಗಾಗಿ ಸಿಪಿಸಿ ಅರುಣರವರನ್ನು ನೇಮಿಸಿ ಕಳುಹಿಸಿಕೊಟ್ಟೆನು. ಆದರೆ ಅವರು

ಆರೋಪಿ ಪತ್ತೆಯಾಗಿಲ್ಲ ಎಂದು ಅದೇ ದಿನ ವರದಿ ನೀಡಿದರು. ನನಗೆ ವರ್ಗಾವಣೆಯಾಗಿದ್ದ ಕಾರಣ ದಿಃ 15-06-2023 ರಂದು ಪ್ರಕರಣದ ಕಡತವನ್ನು ಚಾಸಾ.22 ರವರಿಗೆ ನೀಡಿದೆನು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ -</u>

14. ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಗ್ರಾಮದ ಮುಖ್ಯ ರಸ್ತೆಯಾಗಿದ್ದು, ಅಲ್ಲಿ ಜನರ ಮತ್ತು ವಾಹನಗಳ ಓಡಾಟ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಸಿಮೆಂಟ್ ರಸ್ತೆಯಾಗಿತ್ತು ಎಂದರೆ ಸರಿ. ನಿಪಿ.3 ಮತ್ತು ಪಿ.4 ಫೋಟೋಗಳಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಸಿಮೆಂಟ್ ರಸ್ತೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ ಎಂದರೆ ಸರಿ. ಸಿಮೆಂಟ್ ಮೇಲೆ ಇದ್ದ ರಕ್ತವನ್ನು ನೀವು ಕೆರೆದು ತೆಗೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಜನರ ಮತ್ತು ವಾಹನಗಳ ಓಡಾಟ ಅಷ್ಟಾಗಿ ಇರದಿದ್ದ ಕಾರಣ ಸಿಮೆಂಟ್ ಮೇಲೆ ಮಣ್ಣು ಇದ್ದು ಅದರ ಮೇಲೆ ಇದ್ದ ರಕ್ತದ ಕಲೆಗಳನ್ನು ಸಂಗ್ರಹಿಸಿದ್ದೇನೆ ಎನ್ನುತ್ತಾರೆ. ನಿಪಿ.3 ಮತ್ತು ಪಿ.4 ಫೋಟೋಗಳಲ್ಲಿ ನೀವು ಹೇಳಿದಂತೆ ಸಿಮೆಂಟ್ ಮೇಲೆ ಮಣ್ಣು ಇರುವುದು ಕಂಡುಬರುವುದಿಲ್ಲ ಎಂದರೆ ಸಾಕ್ಷಿ ರಸ್ತೆಯ ಮೇಲೆ ಇದ್ದ ಮಣ್ಣಿಗೆ ತುಂಬಾನೇ ರಕ್ತ ಅಂಟಿಕೊಂಡಿತ್ತು ಎನ್ನುತ್ತಾರೆ.

15. ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಶರ್ಟಿನ ಮುಂಭಾಗದಲ್ಲಿ ಚಾಕುವಿನಿಂದ ತಿವಿದ ಯಾವುದೇ

ಗುರುತುಗಳು ಕಂಡುಬರುವುದಿಲ್ಲ ಎಂದರೆ ಸರಿ. ನಿಮ್ಮ ತನಿಖಾ ಕಾಲದಲ್ಲಿ 2 ನೇ ಆರೋಪಿ ಯಾರೆಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಪ್ರಯತ್ನಿಸಿದೆನು, ಆದರೆ ಗಾಯಾಳು ಚಾಸಾ.1 ರವರು ಸಹ ಆತ ಯಾರೆಂದು ತಮಗೆ ಗೊತ್ತಿಲ್ಲವೆಂದು ತಿಳಿಸಿದ್ದರು ಮತ್ತು ಪ್ರತ್ಯಕ್ಷ ಸಾಕ್ಷಿ ಸಹ ಆತ ಯಾರೆಂದು ಗೊತ್ತಿಲ್ಲವೆಂದು ತಿಳಿಸಿದ್ದರು ಎನ್ನುತ್ತಾರೆ. ನೀವು ಹೇಳಿದಂತೆ ಸದರಿ ವಿಚಾರವನ್ನು ಯಾರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದರೆ ಸಾಕ್ಷಿ ಗಾಯಾಳು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎನ್ನುತ್ತಾರೆ.

16. ನೀವು ಚಾಸಾ.16 ರವರಿಂದ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ವರದಿಯನ್ನು ಪಡೆದುಕೊಂಡಿದ್ದಾಗಿ ಹೇಳಿದ್ದೀರಿ ಆದರೆ ಸದರಿ ಸ್ಥಳದಲ್ಲಿ ವಿದ್ಯುತ್ ಬಲ್ಬ ಅಳವಡಿಸಿದ್ದ ಬಗ್ಗೆ ನೀವು ಪರಿಶೀಲಿಸಿದ್ದೀರಾ ಮತ್ತು ದಾಖಲೆ ಪಡೆದಿದ್ದೀರಾ ಎಂದರೆ ಸಾಕ್ಷಿ ಸ್ಥಳದಿಂದ ಸುಮಾರು 10 ಅಡಿ ದೂರದಲ್ಲಿ ವಿದ್ಯುತ್ ಕಂಬ ಇತ್ತು ಎನ್ನುತ್ತಾರೆ. ಸದರಿ ಕಂಬದಲ್ಲಿ ವಿದ್ಯುತ್ ಬಲ್ಬ ಅಳವಡಿಸಿದ ಬಗ್ಗೆ ನೀವು ದಾಖಲೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ದಾಖಲೆ ಪಡೆದಿಲ್ಲ, ಆದರೆ ಬಲ್ಬ ಇತ್ತು ಎನ್ನುತ್ತಾರೆ. ನಿಪಿ.3 ಮತ್ತು ಪಿ.4 ಫೋಟೋಗಳಲ್ಲಿ ವಿದ್ಯುತ್ ಕಂಬಗಳು ಇದ್ದು ಅವುಗಳಲ್ಲಿ ಬಲ್ಬ ಕಂಡುಬರುವುದಿಲ್ಲ ಎಂದರೆ ಸಾಕ್ಷಿ ಸದರಿ ಸ್ಥಳ ಜಕ್ಷನ್ ಆಗಿದ್ದು, ಅಲ್ಲಿ ಕಂಡುಬರುವ ವಿದ್ಯುತ್ ಕಂಬಗಳಲ್ಲಿ ಬಲ್ಬ ಅಳವಡಿಸಲಾಗಿತ್ತು ಎನ್ನುತ್ತಾರೆ.

17. ಚಾಸಾ.1 ರವರು ಕೃತ್ಯ ನಡೆದಿದೆ ಎನ್ನಲಾದ ಸಮಯದಲ್ಲಿ ಧರಿಸಿದ್ದ ಪ್ಯಾಂಟ್ ಏನಾಯಿತು ಎಂದರೆ ಸಾಕ್ಷಿ ಅವರ ಪ್ಯಾಂಟ್ ಮತ್ತು ಕಾಚಾವನ್ನು ಮಾತ್ರ ಸ್ಪರ್ಶ ಆಸ್ಪತ್ರೆಯ ವೈದ್ಯಾಧಿಕಾರಿಗಳು ಸಂಗ್ರಹಿಸಿಕೊಟ್ಟಿದ್ದರು, ಆದರೆ ಅವರ ಪ್ಯಾಂಟ್ ಏನಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ಪತ್ರೆಯಿಂದ ಬಟ್ಟೆಗಳನ್ನು ತರಿಸಿಕೊಳ್ಳಲು ನೀವು ಅವರಿಗೆ ನೋಟೀಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

18. ದಿನಾಂಕಃ 23-02-2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದೆನು, ಸ್ಥಳಕ್ಕೆ ಪ್ರಾಸಾ.1 ಮತ್ತು ಪ್ರಾಸಾ.2 ರವರಿಗೆ ನಿಪಿ.1 ರಂತೆ ನೋಟೀಸನ್ನು ಕೊಟ್ಟು ಪಂಚರನ್ನಾಗಿ ಬರಮಾಡಿಕೊಂಡೆನು, ಸ್ಥಳದಲ್ಲಿ ಹಾಜರಿದ್ದ ಪ್ರತ್ಯಕ್ಷ ಸಾಕ್ಷಿಯಾದ ಪ್ರಾಸಾ.8 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪಂಚರ ಸಮಕ್ಷಮ ಬೆಳಿಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿದೆನು, ಸದರಿ ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ದೊರೆತ ರಕ್ತಮಿಶ್ರಿತ ಮಣ್ಣು ಮತ್ತು ಸಾದಾ ಮಣ್ಣನ್ನು ಮು.ಮಾ.3 ಮತ್ತು 4 ರಂತೆ ಮೇಲೆ ಹೇಳಿದ ಪಂಚರ ಸಮಕ್ಷಮ ಪ್ರತ್ಯೇಕವಾಗಿ ಅಮಾನತುಪಡಿಸಿಕೊಂಡೆನು, ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.3 ಮತ್ತು ಪಿ.4 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

19. ದಿಃ 25-02-2023 ರಂದು ಚಾಸಾ.1 ರವರ ಮಾವನಾದ

ಫ್ರಾಸಾ.6 ರವರು ಕೃತ್ಯ ನಡೆದ ಸಮಯದಲ್ಲಿ ಚಾಸಾ.1 ರವರು ಧರಿಸಿದ್ದ ರಕ್ತದ ಕಲೆಗಳಾಗಿದ್ದ ತಿಳಿ ಗುಲಾಬಿ ಬಣ್ಣದ ಒಂದು ತುಂಬು ತೋಳಿನ ಶರ್ಟು ಮತ್ತು ನೀಲಿ ಬಣ್ಣದ ಒಂದು ಕಾಚಾವನ್ನು ತಂದು ಹಾಜರುಪಡಿಸಿದ್ದು ಅವುಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಫ್ರಾಸಾ.3 ಮತ್ತು ಫ್ರಾಸಾ.4 ರವರಿಗೆ ನಿಪಿ.7 ರಂತೆ ನೋಟೀಸನ್ನು ಕೊಟ್ಟು ಪಂಚರನ್ನಾಗಿ ಬರಮಾಡಿಕೊಂಡೆನು, ಸದರಿ ಪಂಚರ ಸಮಕ್ಷಮ ಫ್ರಾಸಾ.6 ರವರು ಹಾಜರುಪಡಿಸಿದ ಬಟ್ಟೆಗಳನ್ನು ಪ್ರತ್ಯೇಕವಾಗಿ ಮು.ಮಾ.1 ಮತ್ತು 2 ರಂತೆ ಅಮಾನತುಪಡಿಸಿಕೊಂಡು ಆ ಬಗ್ಗೆ ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ನಿಪಿ.5 ರಂತೆ ಪಂಚನಾಮೆಯನ್ನು ಜರುಗಿಸಿದೆನು, ಸದರಿ ಪಂಚನಾಮೆಯ ಕಾಲಕ್ಕೆ ನಿಪಿ.6 ರಂತೆ ಫೋಟೋವನ್ನು ತೆಗೆಸಿರುತ್ತೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

20. ದಿಃ 27-02-2023 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಚಾಸಾ.14 ರವರಿಗೆ ನಿಪಿ.27 ರಂತೆ ಮನವಿ ಸಲ್ಲಿಸಿದೆನು, ಅದೇ ದಿನ ಚಾಸಾ.15 ರವರಿಗೆ ಕೃತ್ಯ ನಡೆದ ಸ್ಥಳ ಮತ್ತು ಸಮಯದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ದಾಖಲೆ ನೀಡುವಂತೆ ನಿಪಿ.28 ರಂತೆ ಮನವಿ ಸಲ್ಲಿಸಿದೆನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

21. ಅದೇ ದಿನ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ನಿಪಿ.29 ರಂತೆ ಮನವಿಯನ್ನು ಸಲ್ಲಿಸಿ ಚಾಸಾ.1 ರವರ ರಕ್ತದ ಗುಂಪಿನ ಬಗ್ಗೆ

ದಾಖಲೆ ನೀಡುವಂತೆ ಕೋರಿದ್ದಾಗಿ, ಆ ಬಗ್ಗೆ ದಿಃ 28-02-2023 ರಂದು ನಿಪಿ.30 ರಂತೆ ವರದಿಯನ್ನು ಪಡೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

22. ಕೃತ್ಯಕ್ಕೆ ಸಂಬಂದಿಸಿದಂತೆ ಅಮಾನತುಪಡಿಸಿಕೊಂಡಿದ್ದ ವಸ್ತುಗಳನ್ನು ತಜ್ಞರ ಪರೀಕ್ಷೆಗಾಗಿ ಮಂಗಳೂರಿನ ಆರ್.ಎಫ್.ಎಸ್.ಎಲ್ ಗೆ ದಿಃ 06-03-2023 ರಂದು ಸಿಪಿಸಿ ಪ್ರತಾಪ್ ರವರ ಮುಖಾಂತರ ಕಳುಹಿಸಿಕೊಟ್ಟು ದಿಃ 07-03-2023 ರಂದು ಸ್ವೀಕೃತಿಯನ್ನು ಪಡೆದಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

23. ದಿಃ 17-03-2023 ರಂದು ಚಾಸಾ.14 ರವರಿಂದ ನಿಪಿ.13 ರಂತೆ ನಕ್ಷೆಯನ್ನು ಪತ್ರದೊಂದಿಗೆ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ದಿಃ 12-04-2023 ರಂದು ಫ್ರಾಸಾ.7 ರವರಿಗೆ ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ನೀಡುವಂತೆ ನಿಪಿ.31 ರಂತೆ ಮನವಿಯನ್ನು ಸಲ್ಲಿಸಿದ್ದಾಗಿ, ದಿಃ 15-04-2023 ರಂದು ಸದರಿಯವರಿಂದ ಚಾಸಾ.1 ರವರ ಗಾಯದ ಪ್ರಮಾಣಪತ್ರವನ್ನು ನಿಪಿ.15 ರಂತೆ ಪಡೆದುಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

24. ನೀವು ಹೇಳಿದಂತೆ ಯಾವುದೇ ಕರ್ತವ್ಯ ನಿರ್ವಹಿಸದಿದ್ದರೂ ಸಹ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

<u>ಸಾಕ್ಷಿಯ ಸಹಿ</u>